ಮಾಧ್ಯಮ ಮಾಹಿತಿ:

ರಾಚೇನಹಳ್ಳಿ ಕೆರೆ ಒತ್ತುವರಿ ತೆರವು ಕಾರ್ಯಾಚರಣೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯ ಥಣಿಸಂದ್ರ ವಾರ್ಡ್-06 ವ್ಯಾಪ್ತಿಗೆ ಬರುವ ರಾಚೇನಹಳ್ಳಿ ಕೆರೆ ಒತ್ತುವರಿ ತೆರವು ಕಾರ್ಯಾರಣೆಯನ್ನು ಇಂದು ನಡೆಸಲಾಗಿರುತ್ತದೆ.

ಸದರಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಯಲಹಂಕ ವಲಯ ಜಂಟಿ ಆಯುಕ್ತರು, ಕೆರೆಗಳ ವಿಭಾಗದ ಮುಖ್ಯ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು-ಬ್ಯಾಟರಾಯನಪುರ ವಿಭಾಗ ಹಾಗೂ ಕಾರ್ಯಪಾಲಕ ಅಭಿಯಂತರರು-4(ಕೆರೆಗಳ ವಿಭಾಗ) ರವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿದ್ದು, ಕೆರೆಯ ಪೂರ್ವಭಾಗದಲ್ಲಿ ಸ್ಥಳಿಯರು 2 ಎಕರೆ 38 ಗುಂಟೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು 8 ತಾತ್ಕಾಲಿಕ ಶೆಡ್, ಚಪ್ಪಡಿ ಕಲ್ಲು ಮಾರಾಟ, ಹೂಕುಂಡಗಳ ಮಾರಾಟ ಹಾಗೂ ಹೋಟೆಲ್ ವ್ಯಾಪಾರವನ್ನು ಅನಧಿಕೃತವಾಗಿ ನಡೆಸಲಾಗುತ್ತಿತ್ತು. ಅದನ್ನೆಲ್ಲಾ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ. ಅಲ್ಲದೆ ತೆರವುಗೊಳಿಸಲಾದ ಪ್ರದೇಶಕ್ಕೆ ತಂತಿ-ಬೇಲಿ ಅಳವಡಿಸುವ ಕಾರ್ಯವನ್ನು ಕೂಡಲೆ ಪ್ರಾರಂಭಿಸಲಾಗಿರುತ್ತದೆ.

ರಾಚೇನಹಳ್ಳಿ ಕೆರೆಯು ಒಟ್ಟು 91.39 ಎಕರೆ ಪ್ರದೇಶದಲ್ಲಿದ್ದು, ಈ ಪೈಕಿ ಒಟ್ಟು 3.37 ಎಕರೆ ಒತ್ತುವರಿಯಾಗಿದ್ದು, ಕರ್ನಾಟಕ ಉಚ್ಚನ್ಯಾಯಾಲಯದ PIL WP NO.38401/2014 ರಲ್ಲಿ ದಿನಾಂಕ: 04.03.2020 ರಂದು ನೀಡಿದ ಆದೇಶದಂತೆ ಬಿಬಿಎಂಪಿ ವತಿಯಿಂದ K.M.C ಕಾಯ್ದೆಯನ್ವಯ ಕ್ರಮವಹಿಸಿ ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಯಲ್ಲಿನ ಒತ್ತುವರಿ ತೆರವುಗೊಳಿಸಲು ಸೂಚನೆ ನೀಡಿದ್ದು, ಆ ನಿರ್ದೇಶನದಂತೆ ಕೆರೆಯಲ್ಲಿನ ಎಲ್ಲಾ ಒತ್ತುವರಿದಾರರಿಗೆ ಸೂಚನಾ ಪತ್ರ ನೀಡಲಾಗಿರುತ್ತದೆ. ಈ ಪೈಕಿ ಕೆಲ ಒತ್ತುವರಿದಾರರು ಘನ ಉಚ್ಚನ್ಯಾಯಾಲಯದ ಮೊರೆ ಹೋಗಿ ಮುಂದಿನ ವಿಚಾರಣೆಯವರೆವಿಗೂ ಯಾವುದೇ ಕ್ರಮ ವಹಿಸದಂತೆ ಸೂಚಿಸಿದ್ದು, ಮುಂದಿನ ವಿಚಾರಣೆ ಮಾಡಿ ಆದೇಶ ನೀಡುವವರೆಗೂ  ಒತ್ತುವರಿ ತೆರವು ಮಾಡದಂತೆ ತಡೆಯಾಜ್ಞೆ ನೀಡಿರುತ್ತದೆ.

ಒಟ್ಟು ಒತ್ತುವರಿಯ ಪೈಕಿ ಹಾಲಿ ನ್ಯಾಯಾಲಯದ ತಡೆಯಾಜ್ಞೆ ಒರತುಪಡಿಸಿ ಒಟ್ಟಾರೆ 2.38 ಎಕರೆ ಒತ್ತುವರಿ ಪ್ರದೇಶವನ್ನು ತೆರವುಗೊಳಿಸಲಾಗಿದ್ದು, ಇದರ ಮೌಲ್ಯ 80 ಕೋಟಿ ರೂ.ಗಳಿರುತ್ತವೆ. ಮುಂದಿನ ದಿನಗಳಲ್ಲಿ ಘನ ಉಚ್ಚನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ ಬಾಕಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುವುದು ಎಂದು ಮುಖ್ಯ ಅಭಿಯಂತರರು(ಕೆರೆಗಳು) ಮೋಹನ್ ಕೃಷ್ಣಾ ರವರು ಪತ್ರಿಕಾ ಪ್ರಕಟಣೆ ಮುಖಾಂತರ ತಿಳಿಸಿರುತ್ತಾರೆ.